# ಮನಸ್ಸಿನ ತಳಾತಳಕ್ಕೆ ಸಮ್ಮೋಹಿನಿಯ ಪಾತಾಳಗರಡಿ

ಡಾ. ರೂಪಾ ನಿವೇದಿತಾಳಿಗೆ ಬೆಳಿಗ್ಗೆ ನೀಡಿದ ಸಮಯದ ಬದಲಿಗೆ ಎರಡು ತಾಸುಗಳ ನಂತರ ಬರಲು ತಿಳಿಸಿದ್ದರು. ಅಲ್ಲದೆ ಪ್ರದೀಪನಿಗೆ ಹತ್ತು ಗಂಟೆಗೆ ಬರಲು ಸಂದೇಶ ಹಾಕಿದ್ದರು. ಹಾಗಾಗಿ ಪ್ರದೀಪ ಬೆಳಿಗ್ಗೆ ಬೇಗನೇ ಡಾ. ರೂಪಾ ಅವರ ಕಚೇರಿಯಲ್ಲಿದ್ದ.

ಡಾ. ರೂಪಾ ನೇರವಾಗಿ ವಿಷಯಕ್ಕೆ ಬಂದಿದ್ದರು, 'ಹೇಳಿ. ನಿಮಗೆ ನಿಮ್ಮ ಪತ್ನಿ ಬಗ್ಗೆ ಏನೆಲ್ಲಾ ತಿಳೀತು?' ಎಂದು ಪ್ರಶ್ನಿಸಿದರು.

ಪ್ರದೀಪ ಹಿಂದಿನ ದಿನ ನಡೆದ ಘಟನೆಯನ್ನು ಒಂದಿನಿತೂ ಬಿಡದೆ ಎಲ್ಲವನ್ನೂ ಅರುಹಿದ.

ಡಾ. ರೂಪಾ ಮತ್ತೆ ಕೆದಕಿ ಕೇಳುತ್ತ, 'ಹಿಂದಿನ ಸಲ ನಿವಿ ತಾಯಿ ಮನೆಗೆ ಹೋದಾಗಲೂ ಹೀಗೇ ವರ್ತಿಸಿದ್ದರೆಂದೂ ಹೇಳಿದ್ದಿರಿ. ಅದೇ ರಿಲೇಟಿವ್ಸ್‌ಗಳೇನಾ ಇವರೂ?'

'ಹೌದು. ಅದು ನಿವಿಯ ಸೋದರ ಮಾವ, ಅತ್ತೆ, ಅವರ ಮಗಳು ಕೃತ್ತಿಕಾ. ನಿವಿ ಬಾಲ್ಯದಲ್ಲಿ ಹಲ್ಲೆ ಮಾಡುತ್ತಿದ್ದದ್ದು ಅವರ ಮಗಳು ಕೃತ್ತಿಕಾಳನ್ನು! ಅವಳನ್ನು ಕಂಡರೆ ಆಗದೇ ನಿನ್ನೆ ಕೂಡಾ ಬಾಗಿಲು ಹಾಕಿಕೊಂಡು ಕುಳಿತು ಭೇಟಿಯಾಗಲೇ ಇಲ್ಲ. ಆಕೆಯನ್ನು ಕಂಡರೆ ನಿವಿಗೆ ಆಗುವುದಿಲ್ಲ. ಅವರ ಮಕ್ಕಳನ್ನೂ ಹತ್ತಿರ ಸೇರಿಸಿಕೊಳ್ಳದೆ ಹಿಂದಿನ ಬಾರಿ ಮಂಚದ ಕೆಳಗಿನ ಟಬ್‌ನಲ್ಲಿ ಮಗುವನ್ನು ಹಾಕಿ ಬಟ್ಟೆ ಮುಚ್ಚಿದ್ದಳು.'

'ಪ್ರದೀಪ್, ಇದು ನಮ್ಗೆ ತುಂಬಾ ಪೂರಕವಾಯಿತು. ನಮಗೆ ಸಮಸ್ಯೆಯನ್ನು ಅರ್ಥಮಾಡಿಕೊಂಡು ಅದನ್ನು ಬಗೆಹರಿಸುವ ಕೀಲಿಕೈ ಆಯಿತು. ಅದು ತಿಳಿದುಬಿಟ್ಟರೆ ಉಪಶಮನ ಸುಲಭ. ನಿಮ್ಮ ಸಮಸ್ಯೆ ಪರಿಹಾರವಾದಂತೆಯೇ!'

ಡಾ. ರೂಪಾರ ಭರವಸೆಯ ಮಾತಿಗೆ ಪ್ರದೀಪ ಹಿಗ್ಗಿದ.

'ಥ್ಯಾಂಕ್ಸ್ ಮೇಡಮ್. ನನಗೆ ನಿವಿ ನನ್ನೊಡನೆ ಸಹಜವಾಗಿ ಜೀವನ ನಡೆಸಬೇಕು. ಅವಳನ್ನು ಕಾಡುವ ಈ ಭೂತದಿಂದ ಬಿಡುಗಡೆಗೊಳಿಸಿ.'

'ಭೂತವಲ್ಲ ಪ್ರದೀಪ್, ಭೂತಕಾಲದ ಯಾವುದೋ ಆಘಾತ! ಡೋಂಟ್ ವರಿ. ಎವೆರಿಥಿಂಗ್ ವಿಲ್ ಬಿ ಫೈನ್!' ಎಂದು ಆತನನ್ನು ಕಳಿಸಿಕೊಟ್ಟರು.

ನಿವೇದಿತಾ ತನಗೆ ತಿಳಿಸಿದ ಸಮಯಕ್ಕೆ ಸರಿಯಾಗಿ ಡಾ. ರೂಪಾರನ್ನು ಭೇಟಿ ಆಗಲು ಆಗಮಿಸಿದಳು.

ಹಿಂದಿನ ಭೇಟಿಯಲ್ಲಿ ಆಕೆಯ ಮುಖದಲ್ಲಿದ್ದ ನಿರ್ಮಲ ಭಾವ ಈಗ ಉಳಿಯದೇ ಕಂಗಳು ಕಾಂತಿಹೀನವಾಗಿ ಮುಖ ಮ್ಲಾನವಾಗಿರುವುದು ಮೊದಲ ನೋಟಕ್ಕೇ ಡಾ. ರೂಪಾ ಅವರ ಗಮನಕ್ಕೆ ಬಂದಿತ್ತು.

'ಎನಿಥಿಂಗ್ ರಾಂಗ್ ಡಿಯರ್, ನಾನು ನಿನ್ನನ್ನು ಏಕವಚನದಲ್ಲಿ ಕರೆಯಬಹುದಾ?' ಎಂದು ಆತ್ಮೀಯವಾಗಿ ಮಾತನಾಡಿಸಿದರು.

'ಖಂಡಿತಾ ಮೇಡಮ್!'

'ಏನಾಯಿತು, ಯಾಕೆ ಸಪ್ಪಗಿದ್ದೀಯಾ?' ಕಕ್ಕುಲತೆ ತೋರಿಸಿದರು. ನಿವಿಯನ್ನು ಆತ್ಮೀಯತೆಯ ತೆಕ್ಕೆಯೊಳಗೆ ಸೇರಿಸಿಕೊಳ್ಳುವ ಪ್ರಯತ್ನ ಮಾಡಿದರು.

'ಏನಿಲ್ಲ ಮೇಡಮ್. ನಾನು ಚೆನ್ನಾಗಿದ್ದೀನಿ' ನಿವಿಯ ನಗು, ಮಾತುಗಳೆರಡೂ ಹಾರ್ದಿಕವಾಗಿರಲಿಲ್ಲ.

'ಸೋ, ನಿನ್ನೆ ಸಂಡೇ. ನೀವಿಬ್ರೂ ಔಟಿಂಗ್‌ಗೆ ಎಲ್ಲಿ ಹೋಗಿದ್ರಿ? ಎಂಜಾಯ್ ಮಾಡಿದ್ರಾ?'

'ಇಲ್ಲ ಮೇಡಮ್, ಹೋಗಲಾಗಲಿಲ್ಲ' ಎಂದಳು ಬೇಸರ ವ್ಯಕ್ತಪಡಿಸುತ್ತಾ.

'ಯಾಕೆ?' ಡಾ. ರೂಪಾ ಕುತೂಹಲದಿಂದ ಕೇಳಿದರು.

'ಪ್ರದೀಪ್ ನಿನ್ನೆ ಕೂಡಾ ಬ್ಯುಸಿ. ಮನೇಲೆ ಇರಲಿಲ್ಲ. ಮತ್ತೆ ಯಾರ ಜೊತೆಗೆ ಹೋಗಲಿ?' ನಿರಾಸೆಯಲ್ಲಿ ಅದ್ದಿ ತೆಗೆದಂತೆ ನುಡಿದಳು ನಿವಿ.

'ಓಹ್ ಹೌದಾ? ಅವರಿಗೆ ಸಮಯ ಇಲ್ಲ, ಅಲ್ಲವೇ?'

'ಹ್ಞೂಂ. ಸಮಯ ಇಲ್ಲವೆನ್ನುವುದಕ್ಕಿಂತ ನನ್ನ ಬಗ್ಗೆ ಆಸಕ್ತಿ ಇಲ್ಲ ಎನ್ನಬಹುದು. ಅದಕ್ಕೇ ನಿಮ್ಮ ಬಳಿ ಅವರನ್ನು ಕರೆ ತಂದದ್ದು. ಅವರಿಗೆ ನೀವೇ ಸಲ್ಪ ತಿಳಿ ಹೇಳಿ. ಮನೆಗಿಂತಲೂ ಹೊರಗೇ ಅವರ ಗಮನ ಜಾಸ್ತಿ' ಆಕ್ಷೇಪಿಸಿದಳು ನಿವಿ. ಈಗವಳು ಮತ್ತೆ ಸಹಜ ಸ್ಥಿತಿಗೆ ಬಂದು ನಿರಾಳವಾಗಿ ಮಾತನಾಡತೊಡಗಿದ್ದಳು.

'ಪ್ರದೀಪ್‌ಗೆ ನಿನ್ನ ಮೇಲೆ ಮುಂಚಿನ ಆಕರ್ಷಣೆ ಇಲ್ಲವೆಂದು ನಿನಗೆ ಯಾಕೆ ಅನ್ನಿಸುತ್ತೆ?'

'ಅವರು ನನಗೆ ಸಮಯವೇ ಕೊಡುವುದಿಲ್ಲ. ನನಗಿಂತ ಆಫೀಸೇ ಹೆಚ್ಚು. ಗಂಡಸರೇ ಇಷ್ಟು' ಅವಳ ಮುಖದಲ್ಲಿ ಅಸಮಾಧಾನ ವ್ಯಕ್ತವಾದರೆ ದನಿಯಲ್ಲಿ ಕಹಿ ಇಣುಕಿತು.

'ಗಂಡಸರ ಬುದ್ಧೀನೇ ಅಷ್ಟು, ಅಲ್ಲವಾ? ನಿನ್ನ ಮಾತು ನಿಜ' ಆಕೆಯ ಮಾತಿಗೆ ಪುಷ್ಟಿ ನೀಡುವಂತೆ ಒತ್ತಿ ನುಡಿದರು ರೂಪಾ.

ಆಕೆಯ ಅನುಮೋದನೆ ಸಿಕ್ಕಾಗ ನಿವಿಯ ಮುಖ ಗೆಲುವಾಯಿತು.

'ನೀನು ಮೆಂಟಲಿ ಬಹಳ ಸ್ಟ್ರಾಂಗ್ ಆಗಿದೀಯಾ, ಪ್ರದೀಪ್ ಹೇಳ್ತಿದ್ರು'.

ಪ್ರದೀಪನ ಪ್ರಸ್ತಾಪ ಬಂದೊಡನೇ ನಿವಿ ಕುಳಿತ ಭಂಗಿ ಬದಲಾಯಿತು. ಅವಳು ಬಾಗಿ ಕುತೂಹಲ ತೋರಿಸುವಂತೆ, 'ಇನ್ನೇನಂದರು ನನ್ನ ಬಗ್ಗೆ ಅವರು?'

'ವಿಶೇಷವೇನಿಲ್ಲ. ನಿಧಿ ಬಗ್ಗೆ ಹೆಚ್ಚು ಪ್ರೊಟೆಕ್ಟಿವ್ ಅಂತೆ ನೀನು'.

'ನನ್ನ ಮಗಳನ್ನು ನಾನಲ್ಲದೇ ಇನ್ನು ಯಾರು

